**<u>ಓಎಸ್.566/15 ಪ್ರಾಸಾ.1</u>**

***<u>(ಸಾಕ್ಷಿಗೆ ದಿನಾಂಕಃ-20.02.2020 ರಂದು ಪ್ರಮಾಣ ವಚನ ಬೋಧಿಸಲಾಯಿತು)</u>***

**<u>ಪಾಟಿ ಸವಾಲು ಪ್ರತಿವಾದಿ ಪರ ಶ್ರೀ.ಎಚ್.ಎಂ. ವಕೀಲರಿಂದಃ</u>**

ನನ್ನ ತಾಯಿ ಈ ದಾವೆಯನ್ನು ಸಲ್ಲಿಸುವ ಸುಮಾರು *15* ದಿನಗಳ ಪೂರ್ವದಲ್ಲಿ ನನಗೆ ಅಧಿಕಾರ ಪತ್ರ ಬರೆದುಕೊಟ್ಟಿರುತ್ತಾರೆ. ಅಪ್ಪಾಜಿಗೌಡ ವಕೀಲರ ಕಛೇರಿಯಲ್ಲಿ ಬರೆದುಕೊಟ್ಟಿರುತ್ತಾರೆ. ಅಧಿಕಾರಪತ್ರವನ್ನು ನನ್ನ ತಾಯಿ ಹೇಳಿ ಬರೆಸಿರುತ್ತಾರೆ. ನನ್ನ ತಾಯಿಗೆ ವಯಸ್ಸಾಗಿದ್ದು, ಖಾಯಿಲೆ ಇರುವುದರಿಂದ ನ್ಯಾಯಾಲಯಕ್ಕೆ ಬಂದು ದಾವೆ ಸಲ್ಲಿಸಲು ಆಗಿರುವುದಿಲ್ಲ. ನನ್ನ ತಾಯಿ ಬಂದು ಸಾಕ್ಷ್ಯ ಹೇಳಿದರೆ ಸತ್ಯಾಂಶ ತಿಳಿಯುತ್ತದೆಂದು ನಾನು ಈ ದಾವೆಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತು ನನ್ನ ತಾಯಿಯ ಪಿತ್ರಾರ್ಜಿತ ಆಸ್ತಿ. ಮೊದಲು ನನ್ನ ತಂದೆ ಹೆಸರಿನಲ್ಲಿತ್ತು, ನನ್ನ ತಂದೆ ತೀರಿಕೊಂಡ ನಂತರ ನನ್ನ ತಾಯಿಯ ಹೆಸರಿಗೆ ಸೇರಿರುತ್ತದೆ. ದಾವಾ ಸ್ವತ್ತು ನನ್ನ ತಂದೆಗೆ ಸೇರಿತ್ತು ಎಂಬ ಬಗ್ಗೆ ಆರ್.ಟಿ.ಸಿ. ಮತ್ತು ಪಕ್ಕಾಪುಸ್ತಕ ನೀಡಿರುತ್ತೇನೆ. ದಾವಾ ಸ್ವತ್ತಿನ ಆರ್.ಆರ್. ಚಿಕ್ಕೀರೇಗೌಡನ ಮಗ ಚನ್ನವೀರೇಗೌಡನ ಹೆಸರಿನಲ್ಲಿದೆ. ಇಂಡೆಕ್ಸ್ ಆಫ್ ಲ್ಯಾಂಡ್ ಹೊನ್ನೇಗೌಡನ ಹೆಸರಿನಲ್ಲಿದೆ. ಆರ್.ಆರ್. ಮತ್ತು ಇಂಡೆಕ್ಸ್ ಆಫ್ ಲ್ಯಾಂಡನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ. ವಂಶವೃಕ್ಷವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. ಪ್ರತಿವಾದಿಗಳು ನನ್ನ ತಾಯಿಯ ಚಿಕ್ಕಪ್ಪನ ಮಕ್ಕಳು. ಚನ್ನವೀರಯ್ಯ ನನ್ನ ತಾಯಿಯ ಚಿಕ್ಕಪ್ಪ. *2* ಮತ್ತು *3* ನೇ ಪ್ರತಿವಾದಿಗಳು *1* ನೇ ಪ್ರತಿವಾದಿಯ ಮೊಮಕ್ಕಳು. ಸಿದ್ದೇಗೌಡನ ಹೆಂಡತಿ ಚಿಕ್ಕಮ್ಮ ನನ್ನ ತಾಯಿ. *4* ನೇ ಪ್ರತಿವಾದಿಯ ಗಂಡ ಕೋಳಿಸಿದ್ದೇಗೌಡ ಎಂದು ತೋರಿಸಲು ದಾಖಲೆಯಿಲ್ಲ. *4* ನೇ ಪ್ರತಿವಾದಿ *1* ನೇ ಪ್ರತಿವಾದಿಯ ಮಗಳು ಎಂದರೆ ಸರಿ. ನನ್ನ ತಾಯಿಯ ಗಂಡನ ಹೆಸರು ಸಿದ್ದೇಗೌಡ ಮತ್ತು *4* ನೇ ಪ್ರತಿವಾದಿಯ ಗಂಡನ ಹೆಸರು ಸಿದ್ದೇಗೌಡ ಎಂದರೆ ಸರಿ. ನಾನು ಉದ್ದೇಶಪೂರ್ವಕವಾಗಿ *4* ನೇ ಪ್ರತಿವಾದಿಯ ಗಂಡ ಕೋಳಿಸಿದ್ದೇಗೌಡ ಎಂದು ನಮೂದಿಸಿರುತ್ತೇನೆ ಎಂದರೆ ಸಾಕ್ಷಿ ಅವರನ್ನು ಕೋಳಿಸಿದ್ದೇಗೌಡ ಎಂದೂ ಕರೆಯುತ್ತಾರೆ ಎಂದು ನುಡಿದಿರುತ್ತಾರೆ.

(ನ್ಯಾಯಾಲಯದ ಅವಧಿ ಮುಕ್ತಾಯವಾದ ಕಾರಣ ಪಾಟಿ ಸವಾಲನ್ನು ಮುಂದೂಡಲಾಯಿತು)

***(ತೆಃನ್ಯಾಃದಲ್ಲಿ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)***

***ಓ ಹೇ ಕೇ ಸ ಇ ಒ***

***1ನೇ ಅಪರ ಸಿವಿಲ್ ನ್ಯಾಯಾಧೀಶರು***

***ಮದ್ದೂರು.***